ಸಾಕೆಂದು ಒತ್ತಾಯದಿಂದ ಮನಸ್ಸು ತಿದ್ದಿಕೊಂಡೆ.

ಇದಾದ ನಂತರದ ಭಾನುವಾರ ಸಂಜೆಗೆಲ್ಲ, ಶೇಷೂ ತಾತನ ಒಬ್ಬನೇ ಮಗನಾದ ಗುರುಚರಿತನೂ ಅವನ ಮಡದಿ ಶಾಂಭವಿಯೂ ಮನೆಗೆ ಬಂದರು. ಹೂವು, ಹಣ್ಣು, ತಾಂಬೂಲದೊಡನೆ, ಭರ್ಜರಿಯಾದ ಕಾಂಜೀವರಂ ಸೀರೆಯನ್ನೂ ತಂದು, ಮಗನ ಸಲುವಾಗಿ ವಧು ಯಾಚಿಸಿದರು. ಒಳಗೆ ಅಳುಕಿಟ್ಟುಕೊಂಡೇ ಉಪಚರಿಸಿದೆ. ಉಪ್ಪಿಟ್ಟು–ಸಜ್ಜಿಗೆಯ ಜೊತೆ ಬೋಂಡಾತಿಥ್ಯ. 'ಹಾಗೆ ನೋಡಿದರೆ, ಕನಕಮ್ಮ, ನನ್ನ ಮಗ ಓರಗೆಯಿಂದ ನಿನಗೆ ತಮ್ಮ ಆಗುತಾನಲ್ಲವಾ?' ಗುರುಚರಿತ ಪ್ರವರಕ್ಕೆ ತೊಡಗಿದ. 'ಆದರೆ ನಿಮ್ಮಮ್ಮ ಸಾವಿತ್ರಿಯೂ ಬೇರೆ ಮನೆ ಸೇರಿದವಳು. ನೀನೂ ಕುಲಕ್ಕೆ ಹೊರಗಾದವಳು... ದೂರದ ಸಂಬಂಧ ಅಲ್ಲವೇ? ಹಾಗಾಗಿ ಪರವಾಗಿಲ್ಲ...' ಎಂದು, ತನ್ನೆಂದಿನ ದೊಡ್ಡ ದನಿಯಲ್ಲಿ ಅಡಾವುಡಿ ಮಾಡಿದ. 'ಏನೇ ಅನ್ನು, ಕನಕ... ಋಣಾನುಬಂಧ ಅನ್ನೋದು ಎಲ್ಲಿರುತ್ತೋ ಏನೋ ಯಾರಿಗೆ ಗೊತ್ತು?' ಶಾಂಭವಿಯೂ ಧ್ವನಿ ಬೆರೆಸಿದಳು. 'ನಿನ್ನ ಮಗಳೇ ನನ್ನ ಮನೆ ಬೆಳಗಬೇಕು ಅನ್ನೋ ವಿಧಿಲಿಖಿತವಿದ್ದರೆ ಯಾರಿಂದ ತಪ್ಪಿಸೋಕಾಗುತ್ತೆ? ಬಹುಶಃ ನಮ್ಮ ಶೇಷೂನೂ ಇವಳಿಗೋಸ್ಕರವೇ ತಡವಾಗಿ ಹುಟ್ಟಿದ ಅನಿಸುತ್ತೆ... ನಾವಿಬ್ಬರೂ ಬಯಸಿ ಬಯಸಿ ಪಡೆದ ಮಗ ಅವನು... ಅವನು ಹುಟ್ಟೋವಾಗ ನನಗೆ ನಲವತ್ತೆರಡು ವಯಸ್ಸು...' ಗುರುಚರಿತ ಮತ್ತೆ ಮಾತು ಬೆಳೆಸಿದ. 'ಭಾಸ್ಕರೀ... ಏನು ಗೊತ್ತಾ, ಮಗು? ನಾನೂ ನಮ್ಮಪ್ಪನಿಗೆ ಲೇಟ್‌ಚೈಲ್ಡು... ಹಾಗಾಗಿಯೇ ನೀನು ನಮಗೆ ಆಗಿಬಂದಿದ್ದು...' ಎಂದು, ತನ್ನ ಭಾವೀ ಸೊಸೆಯ ವಿಶ್ವಾಸ ಗಳಿಸುವ ಮಾತು ಹೇಳಿದ. 'ನಿಮ್ಮಮ್ಮನ ಮದುವೆ ಮಾಡಿದ್ದೇ ನಮ್ಮಪ್ಪ, ಗೊತ್ತಾ ಪುಟ್ಟೀ?'

ನನಗಂತೂ ನನ್ನೊಳಗಿನ ಇರುಸುಮುರುಸು ಸಂಭಾಳಿಸುವುದೇ ಆಯಿತು. ಆದರೆ ಗಂಡ ಹೆಂಡತಿಗೆ ಯಾವ ಮುಜುಗರವೂ ಇದ್ದಂತನಿಸಲಿಲ್ಲ. ಸಜ್ಜಿಗೆಯನ್ನು ಎರಡು ಮೂರು ಸರ್ತಿ ಕೇಳಿ ಬಡಿಸಿಕೊಂಡರು. ಚಿನ್ನು, ಈ ಸಲುವಾಗಿ ಪ್ರತಿಸರ್ತಿ ಕಿಚನು ಹೊಕ್ಕು ಬರುವಾಗ, ಇಬ್ಬರೂ, ಒಂದೇ ಸಮ ಅವಳ ನಡಿಗೆಯನ್ನಳೆದು ತೂಗಿದರು.

'ಮದುವೆ ಯಾವಾಗಿಟ್ಟುಕೊಳ್ಳೋಣ, ಕನಕಮ್ಮ?' ಶಾಂಭವಿ ಇದ್ದಕ್ಕಿದ್ದಂತೆ ವಿಷಯಕ್ಕಿಳಿದಾಗ, ಏನನ್ನುವುದಂತ ತಿಳಿಯಲಿಲ್ಲ. ಗಾಬರಿಯೇ ಮೊದಲಾಯಿತು.

'ಆಂಟೀ... ಒಂದೇ ಒನ್ನಿಮಿಷ... ನಾನು ಮಾತಾಡುತೀನಿ...' ಅನ್ನುತ್ತ ಚಿನ್ನುವೇ ಮಾತನಾಡಿದಳು. ಆಶ್ಚರ್ಯವಾಯಿತು. ಗುರುಚರಿತನೂ, ಶಾಂಭವಿಯೂ ನನಗೂ ಹೆಚ್ಚು ಚಕಿತಮುಖ ತಾಳಿ, ಹುಡುಗಿ ಏನು ಹೇಳಿಯಾಳೆಂಬ ನಿರೀಕ್ಷೆಗೆ ತೊಡಗಿದರು. ಚಿನ್ನುವಿನ ಮೋರೆಯಲ್ಲಿ ದಿಟ್ಟತನದ ನೆಲೆಯಿತ್ತು. 'ನಿಮ್ಮ ಕಾಲದ ಮದುವೇನೇ ಬೇರೆ... ಈಗಿನದೇ ಬೇರೆ... ಮೊದಲು ನಾನೂ ಮತ್ತು ನಿಮ್ಮ ಮಗ ಇನ್ನೊಂದಿಷ್ಟು ವಿಷಯ ಮಾತಾಡೋದಿದೆ... ತಪ್ಪು ತಿಳೀಬೇಡಿ...' ಚಿನ್ನು ನಿಚ್ಚಳವಾಗಿ ಹೇಳಿದಳು.

ಗುರುಚರಿತ ತನ್ನ ಚಡಪಡಿಕೆಯನ್ನು ನುಂಗಲಾಗದೆಯೇ ಸೋತ. 'ಇನ್ನೂ ಏನಮ್ಮ ಇದೆ, ಮಾತಾಡೋದು?' ಎಂದು ತಡವರಿಸಿ ಕೇಳಿದ. 'ಮದುವೆ ಆಗೋದು ಗ್ಯಾರೆಂಟಿ ತಾನೇ?'

'ಛೇ ಛೇ... ಹಾಗಲ್ಲ, ಅಂಕಲ್... ನಾನು ಹೇಳೋದು ಸ್ವಲ್ಪ ಕೇಳಿ...'

ನಾನು ನನ್ನೊಳಗೇ ಉರಿಹೋದೆ! ಅಬ್ಬಾ ಹುಡುಗಿಯೇ... ಅಂದುಕೊಂಡೆ. ನಿನ್ನ ವಯಸ್ಸಿನಲ್ಲಿ ನಾನು ಹೀಗಿದ್ದಿದ್ದರೆ ಏನೆಲ್ಲ ಆಗಬಹುದಿತ್ತು? ಬಹುಶಃ, ಶೇಷೂ ತಾತನ ಅಣತಿ ಮುರಿಯುತ್ತಿದ್ದೆ... ನಿನ್ನ ಅಪ್ಪನಿಗೆ ನಾನು ಒಲ್ಲೆ ಅಂದಿರುತ್ತಿದ್ದೆ... ಆಗ ನೀನು ಉಂಟಾಗುತ್ತಲೇ